ಈ ರೀತಿಯಾಗಿ ರಸ್ತೆಗಳು ಪದೇ ಪದೇ ಹಾಳಾಗುತ್ತಿವೆ. ಅವುಗಳನ್ನು ದುಸ್ಥಿತಿಯಲ್ಲಿಡುವುದು ಕೂಡ ನಿಜವೆ. ಆದರೆ ಅದಕ್ಕೆ ಹೆಚ್ಚಿನ ಅನುದಾನ ಕೊಡಬೇಕಾಗುತ್ತದೆ. ನಬಾರ್ಡ್ ಮೂಲಕವಾಗಿ ಇದಕ್ಕೆ ಹೆಚ್ಚಿನ ಹಣ ಕೊಡಿಸುವಂಥ ಪ್ರಯತ್ನ ಆಗಬೇಕಾಗುತ್ತದೆ. ಮಾನ್ಯ ಲೋಕೋಪಯೋಗಿ ಸಚಿವರಿಗೆ, ಈ ವಿಷಯವನ್ನು ತಿಳಿಸುತ್ತಾ, ಮಾನ್ಯ ಲೋಕೋಪಯೋಗಿ ಸಚಿವರು ಮಾನ್ಯ ಶಾಸಕರನ್ನು ಕರೆಸಿ ಮಾತನಾಡಿ ನಬಾರ್ಡ್‌ಗಾದರೂ ಕೂಡ ಪ್ರಸ್ತಾಪವನ್ನು ಸಲ್ಲಿಸಬೇಕಾಗುತ್ತದೆ ಅಥವಾ ರಾಜ್ಯ ಹೆದ್ದಾರಿ ಅಭಿವೃದ್ಧಿ ಮಂಡಳಿ ನಮ್ಮದೇನೂ ಇದೆ, ಆ ಪ್ರಾಧಿಕಾರದಿಂದಾದರೂ ಕೂಡ ಕ್ರಮ ಕೈಗೊಳ್ಳುತಕ್ಕಂಥದ್ದರ ಬಗ್ಗೆ ನಾನು ತಮಗೆ ಭರವಸೆಯನ್ನು ಕೊಡುತ್ತೇನೆ.

ವಿಷಯ : ರಾಜ್ಯದಲ್ಲಿ ಗೋವಿನ ಜೋಳ ಮತ್ತು ಈರುಳ್ಳಿ ಬೆಳೆದ ರೈತರಿಗೆ ಹಣ ಪಾವತಿಯಾಗದಿರುವುದರ ಬಗ್ಗೆ.

ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಅಧ್ಯಕ್ಷರೆ, ರಾಜ್ಯಾದ್ಯಂತ ಗೋವಿನ ಜೋಳ ಮತ್ತು ಈರುಳ್ಳಿಯನ್ನು ಖರೀದಿಸುವ ಕೆಲಸ ಫೆಬ್ರುವರಿ 10ಕ್ಕೆ ಬಂದ್ ಆಗಿದೆ. ಅಲ್ಲಿಂದ ಇಲ್ಲಿಯವರೆವಿಗೂ ರೈತರಿಗೆ ಪಾವತಿಯಾಗುವ ಹಣವನ್ನು ಪಾವತಿಸಿಲ್ಲ. ಗದಗ್ ಜಿಲ್ಲೆ ಒಂದರಲ್ಲಿ ಸುಮಾರು ನಾಲ್ಕು ಕೋಟಿ ರೂಪಾಯಿಗಿಂತ ಹೆಚ್ಚಿನ ಬಾಕಿ ಉಳಿದಿದೆ. ರೈತರುಗಳು ಸೊಸೈಟಿಯ ಸಾಲ ತುಂಬಬೇಕಾಗಿರುವುದು ಮಾರ್ಚ್ 31ಕ್ಕೆ ಇರುವುದರಿಂದ ಹಣ ಬಿಡುಗಡೆಯಾಗದೇ ಇರುವುದರಿಂದ ರೈತರಿಗೆ ಕಷ್ಟವಾಗಿದೆ. ಅದಕ್ಕೆ ಅತಿ ಶೀಘ್ರದಲ್ಲಿ ಹಣ ಬಿಡುಗಡೆಯಾಗಬೇಕು. ಎಪಿಎಂಸಿ ಯಾರ್ಡ್‌ನಲ್ಲಿ ಅಕಸ್ಮಾತ್ ದಲ್ಲಾಳಿಗಳು ಖರೀದಿಸಿದರೆ ಹಣವನ್ನು 15 ದಿವಸದೊಳಗೆ ಖರೀದಿಸಿದ ಮಾಲಿಗೆ ಹಣ ಪಾವತಿ ಮಾಡದಿದ್ದರೆ ಅವರಿಗೆ ಶಿಕ್ಷೆ ವಿಧಿಸಬೇಕು ಎನ್ನುವ ಕಾನೂನು ಇರುವಾಗ, ಸರ್ಕಾರವೇ ಸುಮಾರು ಒಂದೂವರೆ ಎರಡು ತಿಂಗಳು ವಿಳಂಬವಾಗಿ ಹಣ ಪಾವತಿ ಮಾಡುವುದು ಇದು ಯಾವ ನ್ಯಾಯ ಎಂಬುದನ್ನು ಸರ್ಕಾರ ಗಮನಿಸಬೇಕಾಗುತ್ತದೆ ಮತ್ತು ಅತಿ ಶೀಘ್ರದಲ್ಲಿ ಹಣ ಪಾವತಿಸಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಸದಸ್ಯರು ಬಹಳ ಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಈ ವರ್ಷ ನಾವು ಆವರ್ತನಿಧಿಯಲ್ಲಿಯೇ ಹೆಚ್ಚಿನ ಹಣವನ್ನು ಆಯವ್ಯಯದಲ್ಲಿ ಕೊಟ್ಟಿದ್ದೇವೆ. ನಾವು ನಿರೀಕ್ಷೆ ಮೀರಿದ್ದಕ್ಕಿಂತ ಹೆಚ್ಚು, ನಾವು

ಯಾವ ನಿರ್ಧಾರಯುತವಾದ ಯಾವ ಗಡಿವಿನ ದಿವಸ ಕೊಟ್ಟಿದ್ದೆವು, ಅದಾದ ನಂತರ ಎರಡು ಬಾರಿ ಆ ಗಡುವನ್ನು ವಿಸ್ತರಿಸಿ ಒಂದು ತಿಂಗಳು ಮುಂದುವರಿಸಿರುವುದು ಇದೆ. ಆದುದರಿಂದ, ಹಣವನ್ನು ಕೊಡುವುದರಲ್ಲಿ ವಿಳಂಬ ಸ್ವಲ್ಪ ಮಟ್ಟಿಗೆ ಆಗಿರಬಹುದು, ಖಂಡಿತವಾಗಿಯೂ ಕೂಡ ಅದನ್ನು ಕೊಡುತ್ತಾರೆ. ತಾವು ಏನು ಉದಾಹರಣೆ ಕೊಟ್ಟಿದ್ದೀರಿ, ಎಪಿಎಂಸಿ ಯಲ್ಲಿ 15 ದಿವಸದೊಳಗೆ ಹಣ ಕೊಡದಿದ್ದರೆ ಶಿಕ್ಷೆಯಾಗುತ್ತದೆಂದು ತಾವು ಏನು ಹೇಳಿದಿರಿ, ತಮಗೆಲ್ಲರಿಗೂ ಗೊತ್ತಿರುವಂತೆ, ಖರೀದಿದಾರರು ಮತ್ತು ದಲ್ಲಾಳಿಗಳು ಅವರೇ ಆಗಿರುವುದರಿಂದ ಒಂದೂವರೆ ಎರಡು ತಿಂಗಳಿನಿಂದ ರೈತರಿಗೆ ಇನ್ನು ಹಣ ಕೊಡದಿರುವ ಪ್ರಕರಣಗಳು ಇವೆ. ಅದರ ಬಗ್ಗೆ ಚರ್ಚೆಗೆ ಎಪಿಎಂಸಿ ಮಂತ್ರಿಗಳು ಕರೆದಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಹಣ ಕೊಡದೇ ಸುಮಾರು 4–6 ತಿಂಗಳಾಗಿವೆ.

ಶ್ರೀ ಎಂ.ಪಿ. ಪ್ರಕಾಶ್ : ಇಲ್ಲ, ಏಕೆಂದರೆ, ನಿರೀಕ್ಷೆ ಮೀರಿ ಆವರ್ತನಿಧಿಯಲ್ಲಿ ಹಣವನ್ನು ಬಜೆಟ್‌ನಲ್ಲಿ ಕೊಟ್ಟಿರುವುದರಿಂದ, ಖಂಡಿತವಾಗಿ ಅದರ ಹಣ ಕೊಡುವ ಕೆಲಸ ಮಾಡುತ್ತೇವೆ.

ವಿಷಯ : ಪಿಡಬ್ಲ್ಯೂಡಿ ರಸ್ತೆಗಳಲ್ಲಿರುವ ಎಲೆಕ್ಟ್ರಿಕಲ್ ಪೋಲ್‌ಗಳನ್ನು ಶಿಫ್ಟ್ ಮಾಡುವ ಬಗ್ಗೆ.

ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್) : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕ್ಲಾರಿಫಿಕೇಷನ್ ಏನೆಂದರೆ, ನಾವು ನೋಟೀಸ್ ತೆಗೆದುಕೊಂಡು ಬರುತ್ತೇವೆ. ಪಿಡಬ್ಲ್ಯೂಡಿ ರಸ್ತೆಗಳ ಕಡೆ ಎಲೆಕ್ಟ್ರಿಕಲ್ ಪೋಲ್ ಇವೆ, ಆ ಎಲೆಕ್ಟ್ರಿಕಲ್ ಪೋಲ್ ಶಿಫ್ಟ್ ಮಾಡಬೇಕೆಂದರೆ ಪಿಡಬ್ಲ್ಯೂಡಿ ಯವರು ಹಣ ಕಟ್ಟಬೇಕೆಂದು ಅವರು ಹೇಳುತ್ತಾರೆ, ಕೆಇಬಿ ಯವರು ಅವರು ಹಣ ಕಟ್ಟಿದರೆ ನಾವು ತೆಗೆಯುತ್ತೇವೆಂದು ಹೇಳುತ್ತಾರೆ, ಅದಕ್ಕೆ ಪಿಡಬ್ಲ್ಯೂಡಿ ಯವರು ಹಣ ಕಟ್ಟುವ ಅವಶ್ಯಕತೆ ಇಲ್ಲ. ಎರಡು ಸರ್ಕಾರದ್ದು ತಾನೇ ನಾವು ಈಗಲೇ ಮೀಟಿಂಗ್ ಮಾಡುತ್ತೇವೆಂದು ಹೇಳಿ ಅವರು ಹಣ ಕಟ್ಟುವುದಿಲ್ಲ. ಇವರು ಹಣ ಕಟ್ಟುವವರೆವಿಗೂ ಅವರು ತೆಗೆಯುವುದಿಲ್ಲ ಹೀಗಾಗಿ ಕಂಟ್ರಾಕ್ಟರ್ ಸುಮ್ಮನೆ ಕುಳಿತಿದ್ದಾರೆ. ಅದರ ಬಗ್ಗೆ ಏನಾದರೊಂದು ವ್ಯವಸ್ಥೆ ಮಾಡಿ ಕೊಟ್ಟರೆ ಒಳ್ಳೆಯದು.